ಡಾ॥ ಶಾಮನೂರು ಶಿವಶಂಕರಪ್ಪ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿಚಾರ ಮಾಡುತ್ತೇವೆ. ಒಂದು ಹೆಕ್ಟೇರ್‌ಗೆ 12,000 ರೂ.ಗಳಂತೆ ಒಟ್ಟು 135 ಕೋಟಿ ರೂ.ಗಳ ಪರಿಹಾರವನ್ನು 1,30,590 ರೈತರಿಗೆ ನಾವು ಕೊಟ್ಟಿದ್ದೇವೆ. ಪ್ರತಿ ಹೆಕ್ಟೇರ್‌ಗೆ 2,000 ರೂ.ಗಳ ವರೆಗೆ ಸಸ್ಯ ಸಂರಕ್ಷಣಾ ಔಷಧಿಗಳಿಗಾಗಿ ಸಹಾಯಧನವೆಂದು ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕೆ 134 ಕೋಟಿ ರೂ.ಗಳ ಪ್ಯಾಕೇಜಿಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಇದುವರೆಗೆ ಅಲ್ಲಿಂದ ಯಾವುದೇ reply ಬಂದಿರುವುದಿಲ್ಲ. ನಾನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿದ್ದಾಗ ಕೃಷಿ ಮಂತ್ರಿಯಾಗಿದ್ದ ಮಾನ್ಯ ಶರದ್ ಪವಾರ್ ಅವರಿಗೆ ಪ್ರಸ್ತಾವನೆಯನ್ನು ಕೊಟ್ಟು ಬಂದಿದ್ದೇವೆ. ಆದರೆ ಆ ಪ್ಯಾಕೇಜ್ ಇನ್ನೂ ಬಂದಿಲ್ಲ. ಅದು ಬಂದ ನಂತರ ನಾವು ರೈತರಿಗೆ ಪ್ಯಾಕೇಜ್ ಅನ್ನು ವಿತರಣೆ ಮಾಡುತ್ತೇವೆ.

ಅಧ್ಯಕ್ಷರು:– ಪ್ರಶ್ನೋತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ, ಪಶು ಸಂಗೋಪನೆ, ಮಾನವ ಹಕ್ಕುಗಳು):– ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 5ನೇ ಪಟ್ಟಿಯಲ್ಲಿರುವ 121 ಪ್ರಶ್ನೆಗಳ ಪೈಕಿ 106 ಸಂಖ್ಯೆಯ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಅನುಬಂಧ–1)

ಅಧ್ಯಕ್ಷರು:– ಮಂಡಿಸಲಾಯಿತು.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ನಾನು, ಬೆಳಗಾಂ ಅಧಿವೇಶನದಲ್ಲಿ ಕೇಳಿದ ಹಲವಾರು ಪ್ರಶ್ನೆಗೆ ಇದುವರೆಗೂ ಉತ್ತರ ಬಂದಿಲ್ಲ. ದಯಮಾಡಿ, ತಾವು ಉತ್ತರ ಕೊಡುವುದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ